ವಿವೇಕಾನಂದ ಅಧ್ಯಯನ ಕೇಂದ್ರ (ನಾಗರಿಕ ಸೇವೆಗಳು)
(ಮಾತೃ ಸಂಸ್ಥೆ : ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು (ರಿ))
ವಿವೇಕಾನಂದ ಕಾಲೇಜು ಆವರಣ, ನೆಹರು ನಗರ ಅಂಚೆ, ಪುತ್ತೂರು ದ.ಕ – 574203

# ನಾಗರಿಕ ಸೇವೆಗಳು : ಅರ್ಹತಾ ಪರೀಕ್ಷೆ (ಲಿಖಿತ) – 31–07–2021

(ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ)

ಸಮಯ : 10.00 AM ರಿಂದ 11.00 AM — ಗರಿಷ್ಠ ಅಂಕಗಳು : 100

ಸೂಚನೆ : ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ — (50 x 2=100 Marks)

**ಸೂಚನೆ : ಪ್ರತಿಯೊಂದು ಪ್ರಶ್ನೆಗೂ ಎರಡು ಅಂಕ**

1. ಭಾರತದ ಪ್ರಪ್ರಥಮ ಡಿಜಿಟಲ್ ಬಜೆಟನ್ನು ಮಂಡನೆ ಮಾಡಿದವರು ಯಾರು?
   1) ಶ್ರೀ ನರೇಂದ್ರ ಮೋದಿ 2) ಶ್ರೀಮತಿ ನಿರ್ಮಲಾ ಸೀತಾರಾಮನ್
   3) ರಾಮನಾಥ ಕೋವಿಂದ್ 4) ಯಾರೂ ಅಲ್ಲ

2. ಕೋವಿಡ್–19 ಪ್ರಥಮವಾಗಿ ಪತ್ತೆಯಾದ ಸ್ಥಳ.
   1) ದೆಹಲಿ 2) ವಾಷಿಂಗ್ಟನ್ 3) ವುಹಾನ್ 4) ಜಪಾನ್

3. ಜಗತ್ತಿನ ಅತೀ ದೊಡ್ಡ ಮೊಬೈಲ್ ತಯಾರಿಕಾ ಕಾರ್ಖಾನೆ ಇರುವ ಸ್ಥಳ.
   1) ನೊಯ್ಡಾ–ಉತ್ತರಪ್ರದೇಶ 2) ಕೊರಿಯಾ 3) ಅಮೇರಿಕಾ 4) ಚೀನಾ

4. ಹಾರುವ ಬಲೂನ್ ಗಳಲ್ಲಿ ತುಂಬಿರುವ ಅನಿಲ ಯಾವುದು?
   1) ಜಲಜನಕ 2) ಆಮ್ಲಜನಕ 3) ಇಂಗಾಲ 4) ಯಾವುದೂ ಅಲ್ಲ

5. 'ಹಿಂದ್ ಸ್ವರಾಜ್' ಕೃತಿಯ ರಚನೆಕಾರರು ಯಾರು?
   1) ಅರಬಿಂದೋ ಘೋಷ್ 2) ಸಿ ಆರ್ ದಾಸ್ 3) ಮಹಾತ್ಮ ಗಾಂಧೀಜಿ 4) ಬಾಲಗಂಗಾಧರ ತಿಲಕ್

6. ಭಾರತದ ರಾಷ್ಟ್ರಪತಿ ತನ್ನ ರಾಜೀನಾಮೆಯನ್ನು ಯಾರಿಗೆ ಸಲ್ಲಿಸಬೇಕು?
   1) ಉಪರಾಷ್ಟ್ರಪತಿ 2) ಪ್ರಧಾನಮಂತ್ರಿ
   2) ಲೋಕಸಭಾ ಸ್ಪೀಕರ್ 4) ಮುಖ್ಯ ನ್ಯಾಯಮೂರ್ತಿ

7. ಬ್ಯಾಕ್ಟೀರಿಯಾ ಕಂಡು ಹಿಡಿದವರು ಯಾರು?
   1) ವಿಲಿಯಂ ಹಾರ್ವೆ 2) ಲೆವನ್ ಹುಕ್ 3) ರಾಬರ್ಟ್ ಹುಕ್ 4) ರೊನಾಲ್ಡ್ ರಾಸ್

8. ಹಕ್ಕಿ ಜ್ವರ ಯಾವುದರಿಂದ ಹರಡುತ್ತದೆ?
   1) ವೈರಸ್ 2) ಶಿಲೀಂಧ್ರ 3) ಬ್ಯಾಕ್ಟೀರಿಯಾ 4) ಮಲೀನ ನೀರು

9. ಮಾನವ ದೇಹದ ಅತೀ ಚಿಕ್ಕ ಮೂಳೆ
   1) ಕಿವಿಯ ಮೂಳೆ 2) ತೊಡೆ ಮೂಳೆ 3) ಹಲ್ಲಿನ ಮೂಳೆ 4) ಯಾವುದೂ ಅಲ್ಲ

10. 'ಇನ್‌ಕ್ರೆಡಿಬಲ್ ಇಂಡಿಯಾ'-ಮೊಬೈಲ್ ಆ್ಯಪ್ ಯಾವುದಕ್ಕೆ ಸಂಬಂಧಿಸಿದೆ?
    1) ಪ್ರವಾಸೋದ್ಯಮ ಸೇವೆ 2) ನಗದು ರಹಿತ ವ್ಯವಹಾರ 3) ಡಿಜಿಟಲ್ ಪಾವತಿ 4) ಸಾರ್ವಜನಿಕ ಸೇವೆ

**11. ಭಾರತದ ಷೇಕ್ಸ್‌ಪಿಯರ್ ಎಂದು ಯಾರನ್ನ ಕರೆಯುತ್ತಾರೆ?.**

1) ಕಾಳಿದಾಸ 2) ಸರೋಜಿನಿ ನಾಯ್ಡು 3)ಅಮೀರ್ ಖುಸ್ರೋ 4) ಚೇತನ್ ಭಗತ್

**12. 3 ರಿಂದ ಗುಣಿಸಲ್ಪಡುವ ಮೊದಲ 5 ಸಂಖ್ಯೆಗಳ ಸರಾಸರಿ ಎಷ್ಟು?**

1) 3 2) 9 3) 12 4) 15

**13. ಸುಪ್ರೀಂ ಕೋರ್ಟ್ ‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸುತ್ತಿರುವವರು ಯಾರು?**

1) ಎಸ್ ಎ ಬೊಬಡೆ 2) ಎನ್ ವಿ ರಮಣ 3) ಕೆ ಎಂ ಘೋಷ್ 4) ಅರವಿಂದ ತ್ರಿಪಾಠಿ

**14. ಭಾರತದ ಅತೀ ಎತ್ತರವಾದ ಜೋಗ ಜಲಪಾತವು ಯಾವ ಜಿಲ್ಲೆಯಲ್ಲಿದೆ?**

1.) ಉತ್ತರ ಕನ್ನಡ 2) ಶಿವಮೊಗ್ಗ 3) ಮೈಸೂರು 4) ಚಿಕ್ಕಮಗಳೂರು

**15. ಮಾನವ ದೇಹದಲ್ಲಿ ಇರುವ ಮೂಳೆಗಳ ಸಂಖ್ಯೆ ಎಷ್ಟು ?**

1) 206 2) 600 3)108 4) 42

**16. ಜಗತ್ತಿನಲ್ಲೇ ಅತೀ ದೊಡ್ಡದಾಗಿರುವ ಹೂವಿನ ಹೆಸರೇನು?**

1) ಸೂರ್ಯಕಾಂತಿ 2) ರಫ್ಲೇಸಿಯಾ 3)ವುಲ್ಫಿಯಾ 4) ತಾವರೆ

**17. ಮಾನವ ದೇಹದಲ್ಲಿಸುಮಾರು ಎಷ್ಟು ಶೇಕಡಾ ನೀರಿದೆ?**

1) 65% 2) 40% 3) 80% 4) 20%

**18. ವಿಟಮಿನ್ 'ಸಿ' ಯ ಕೊರತೆಯಿಂದ ಬರುವ ರೋಗ**

1) ಬೆರಿಬೆರಿ 2) ಸ್ಕರ್ವಿ 3) ರಿಕೆಟ್ಸ್ 4) ಕಾಲರಾ

**19. ಏಷ್ಯಾಖಂಡದ ಅತೀ ದೊಡ್ಡ ಕೊಳಚೆ ಪ್ರದೇಶ ಯಾವುದು?**

1) ಮುಂಬೈನ ಧಾರವಿ 2) ಚೀನಾದ ವುಹಾನ್ 3)ಬೆಂಗಳೂರು 4) ದೆಹಲಿ

**20. ಮಹಾಭಾರತದ ಕುರುಕ್ಷೇತ್ರ ಯುದ್ಧ ನಡೆದ ದಿನಗಳು?**

1) 12 2) 14 3) 18 4) 22

**21. "ಜಯಭಾರತ ಜನನಿಯ ತನುಜಾತೆ" ನಾಡಗೀತೆಯನ್ನು ಬರೆದವರು?**

1) ಕುವೆಂಪು 2) ಶಿವರಾಮ ಕಾರಂತ 3) ದ.ರಾ ಬೇಂದ್ರೆ 4) ರವೀಂದ್ರನಾಥ ಠಾಗೋರ್

**22. ಭಾರತದಲ್ಲಿ ಅತೀ ಹೆಚ್ಚು ರೇಷ್ಮೆ ಉತ್ಪಾದಿಸುವ ರಾಜ್ಯ**

1) ಮಹಾರಾಷ್ಟ್ರ 2) ಕಾಶ್ಮೀರ 3) ಕರ್ನಾಟಕ 4) ಕೇರಳ

**23. ಕೋವಿಡ್-19 ಪತ್ತೆ ಹಚ್ಚಲು ನಡೆಸುವ ಪರೀಕ್ಷೆ ಯಾವುದು?**

1) ಪ್ಲಾಸ್ಮಾ ಪರೀಕ್ಷೆ 2) ಆ್ಯಂಟಿ ಬಾಡಿ ಟೆಸ್ಟ್ 3) ಆರ್.ಟಿ.ಪಿ.ಸಿ.ಆರ್ 4) (2) ಮತ್ತು (3)

**24. UPSC- (ಯುಪಿಎಸ್‌ಸಿ) ಇದರ ವಿಸ್ತೃತ ರೂಪ?**

1) ಯುನೈಟೆಡ್ ಪಬ್ಲಿಕ್ ಸರ್ವಿಸ್ ಸೆಂಟರ್ 2) ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್

3) ಯೂನಿಯನ್ ಪಬ್ಲಿಕ್ ಸೇಲ್ಸ್ ಸೆಂಟರ್ 4) ಯೂನಿಯನ್ ಪಬ್ಲಿಕ್ ಸ್ಟೇಟ್ ಸರ್ವೀಸ್

**25. ಶೇಕಡಾ 4ರ ಬಡ್ಡಿ ದರದಂತೆ ರೂ. 2500ರ ಮೇಲೆ 2 ವರ್ಷಗಳಿಗೆ ದೊರಕುವ ಚಕ್ರಬಡ್ಡಿ ಎಷ್ಟು?**

1) ರೂ. 180 2) ರೂ. 204 3) ರೂ. 10 4) ರೂ. 220

**26. 112 ಅನ್ನುವುದು 280ರ ಎಷ್ಟು ಶೇಕಡಾವಾಗುತ್ತದೆ?**

1) 40% 2) 38% 3) 42% 4) 48%

**27. ಭಗವದ್ಗೀತೆಯಲ್ಲಿ ಬರುವ ಒಟ್ಟು ಅಧ್ಯಾಯಗಳು ಎಷ್ಟು?**

1) 4 2) 10 3) 18 4) 12

**28. ಒಬ್ಬ ವ್ಯಾಪಾರಿಯು ರೂ 2000 ಬೆಲೆಯ ವಸ್ತುವನ್ನು ರೂ. 2500ಕ್ಕೆ ಮಾರಿದರೆ ಆತನು ಗಳಿಸಿದ ಶೇಕಡಾ ಲಾಭವೆಷ್ಟು?**

1) 23% 2) 25% 3) 27% 4) 29%

**29. A, B ಮತ್ತು Cಯ ನಡುವಿನ ಅನುಪಾತ 3:2:5 ಆಗಿದ್ದಲ್ಲಿ ರೂ. 1260ರಲ್ಲಿ, 'C' ಗೆ ದೊರೆಯುವ ಮೊತ್ತ ಎಷ್ಟು?**

1) ರೂ. 252 2) ರೂ. 125 3) ರೂ. 503 4) ಯಾವುದೂ ಅಲ್ಲ

**30. ಒಂದು ಗದ್ದೆಯ ಬೆಳೆಯನ್ನು ಕಟಾವು ಮಾಡಲು 15 ಜನರು 28 ದಿನಗಳನ್ನು ತೆಗೆದುಕೊಂಡರೆ, 5 ಜನರಿಗೆ ತಗಲುವ ದಿನಗಳೆಷ್ಟು?**

1) 50 ದಿನ 2) 60 ದಿನ 3) 84 ದಿನ 4) 9.33 ದಿನ

**31. 'ಅಗ್ನಿಯ ರೆಕ್ಕೆಗಳು'(The Wings of Fire) ಎಂಬ ಪುಸ್ತಕವನ್ನು ಬರೆದವರು ಯಾರು?**

1) ಚೇತನ್ ಭಗತ್ 2)ನರೇಂದ್ರ ಮೋದಿ 3) ಎ.ಪಿ.ಜೆ ಕಲಾಂ 4) ಪೂರ್ಣಚಂದ್ರ ತೇಜಸ್ವಿ

**32. 2021ರಲ್ಲಿ ಕರಾವಳಿಗೆ ಹೊಡೆತ ನೀಡಿದ ಅರಬೀ ಸಮುದ್ರದಲ್ಲಿ ಉಂಟಾದ ಚಂಡಮಾರುತದ ಹೆಸರು**

1) ಮಾಸ್ 2) ತೌಖ್ತೆ 3) ಸಾರ್ಸ್ 4) ಯಾವುದೂ ಅಲ್ಲ

**33. ಬೆಂಗಳೂರು –ಮಂಗಳೂರು ನಡುವೆ ಚಲಿಸುವ ವಿಶೇಷ ರೈಲಿಗೆ ಹೊಸದಾಗಿ ಇಟ್ಟಿರುವ ಹೆಸರು?**

1) ಪಂಚಗಂಗಾ ಎಕ್ಸ್‌ಪ್ರೆಸ್ 2) ಕರಾವಳಿ ಎಕ್ಸ್‌ಪ್ರೆಸ್

3) ಮತ್ಸ್ಯಗಂಧ ಎಕ್ಸ್‌ಪ್ರೆಸ್ 4) ಕಾವೇರಿ ಎಕ್ಸ್‌ಪ್ರೆಸ್

**34. ಕರ್ನಾಟಕ ನೂತನ ರಾಜ್ಯಪಾಲರು ಯಾರು?**

1) ತಾವರ್‌ಚಂದ್ ಗೆಹ್ಲೋಟ 2) ರಾಮನಾಥ ಕೋವಿಂದ್

3) ರಮೇಶ್ ಪೋಖ್ರಿಯಾಲ್ 4)ಯಾರು ಅಲ್ಲ

**35. ಈ ಕೆಳಗಿನವುಗಳಲ್ಲಿ ವಿಜಾತೀಯ ಶಬ್ದ ಯಾವುದು?**

i) ಅಜ್ಜ ii) ಜ್ಞಾನ iii) ಅಕ್ಕರೆ iv) ಅಕ್ಷರ

1) i 2) ii ಮತ್ತು iv 3) iv 4) i ಮತ್ತು iii

**36. 'ಚಾತುರ್ಮಾಸ' ಅಂದರೆ ಎಷ್ಟು ತಿಂಗಳುಗಳು?**

1) 2 2) 4 3) 3 4) ಯಾವುದೂ ಅಲ್ಲ

**37. 'ನಸುಕು' ಶಬ್ದದ ಅರ್ಥ**

1) ಮುಂಜಾನೆ 2) ಆವರಿಸು 3) ದಟ್ಟವಾದ ಮಂಜು 4) ಭಯ

**38. Meaning of the word ' Hermit' is**

1) Sage 2) Soldier 3) King 4) Farmer

**39. ________________ the accident the flight was delayed (Fill with linking words)**

1) Owing to 2) Since 3) So that 4) Where as

**40. _______________ my humble opinion, the plot of the book is over extended (Fill with proper preposition)**

1) in 2) at 3) to 4) on

**41. ಶ್ವಾನವೊಂದು ಸಮತಲ ದರ್ಪಣದ ಕಡೆಗೆ ಗಂಟೆಗೆ 20 ಕಿ.ಮೀ ವೇಗದಲ್ಲಿ ಓಡುತ್ತಿದೆ. ದರ್ಪಣಕ್ಕೆ ಸಂಬಂಧಿಸಿದಂತೆ ಶ್ವಾನದ ಪ್ರತಿಬಿಂಬದ ವೇಗ ಎಷ್ಟು??**

1) ಗಂಟೆಗೆ 40 ಕಿ.ಮೀ 2) ಗಂಟೆಗೆ 20 ಕಿ.ಮೀ

3) ಗಂಟೆಗೆ 10 ಕಿ.ಮೀ 4) ಗಂಟೆಗೆ 5 ಕಿ.ಮೀ

**42. ಈ ಕೆಳಗಿನವುಗಳಲ್ಲಿ ಯಾವುದು ಕೋವಿಡ್–19 ಲಸಿಕೆಯಲ್ಲ?**

1) ಕೋವಿಫೀಲ್ಡ್ 2) ಕೋವಿಶೀಲ್ಡ್ 3) ಕೋವ್ಯಾಕ್ಸಿನ್ 4) ಸ್ಪುಟ್ನಿಕ್

**43. ' ವೋಲ್ಟ್ ಕೂಲಮ್' ಕೆಳಗಿನ ಯಾವುದನ್ನು ಸೂಚಿಸುವುದು?.**

1) ಶಕ್ತಿ 2) ಸಾಮರ್ಥ್ಯ 3) ರಾಶಿ 4) ವಿದ್ಯುತ್

**44. ಬೇಕಿಂಗ್ ಸೋಡಾವನ್ನು ಕಾಯಿಸಿದಾಗ ಆಗುವ ಬದಲಾವಣೆ**

1) ಹೈಡ್ರೋಜನ್ ಅನಿಲ ಬಿಡುಗಡೆಯಾಗುತ್ತದೆ.

2) ಕಾರ್ಬನ್ ಡೈ ಆಕ್ಸೈಡ್ ಅನಿಲ ಬಿಡುಗಡೆಯಾಗುತ್ತದೆ.

3) ಯಾವುದೇ ಅನಿಲಬಿಡುಗಡೆಯಾಗುವುದಿಲ್ಲ.

4) ಕ್ಲೋರಿನ್ ಅನಿಲ ಬಿಡುಗಡೆಯಾಗುತ್ತದೆ.

**45. ಮಾನವನ ವಿಸರ್ಜನಾಂಗ ವ್ಯೂಹದಲ್ಲಿ ಮೂತ್ರ ಹರಿಯುವ ಸರಿಯಾದ ಮಾರ್ಗ?**

1) ಮೂತ್ರಪಿಂಡ → ಮೂತ್ರನಾಳ → ಮೂತ್ರದ್ವಾರ → ಮೂತ್ರಕೋಶ

2) ಮೂತ್ರಪಿಂಡ → ಮೂತ್ರಕೋಶ → ಮೂತ್ರದ್ವಾರ → ಮೂತ್ರನಾಳ

3) ಮೂತ್ರಪಿಂಡ → ಮೂತ್ರನಾಳ → ಮೂತ್ರಕೋಶ → ಮೂತದ್ವಾರ

4) ಮೂತ್ರಕೋಶ → ಮೂತ್ರಪಿಂಡ → ಮೂತ್ರನಾಳ → ಮೂತ್ರದ್ವಾರ

**46. ಈ ಕೆಳಗಿನವುಗಳಲ್ಲಿ ಯಾವುದು ಆಪರೇಟಿಂಗ್ ಸಿಸ್ಟಮ್ ಅಲ್ಲ ?**

1) ಯುನಿಕ್ಸ್ 2) ಲಿನಕ್ಸ್ 3) ವಿಂಡೋಸ್ XP 4) ವಿನಕ್ಸ್

**47. ಈ ಕೆಳಗಿನ ನಾಲ್ಕು ಪದಗಳಲ್ಲಿ ಮೂರು ಸಮಾನವಾಗಿದ್ದು ಒಂದು ಭಿನ್ನವಾಗಿದೆ. ಭಿನ್ನವಾದದ್ದು ಯಾವುದೆಂದು ಗುರುತಿಸಿ.**

1) ಮಲ್ಲಿಗೆ 2) ಕಮಲ 3) ಗುಲಾಬಿ 4) ಚೆಂಡು ಹೂವು

**48. ಜನಗಣತಿಯು ಎಷ್ಟು ವರ್ಷಗಳಿಗೊಮ್ಮೆ ನಡೆಯುತ್ತದೆ?**

1) ಪ್ರತಿ ವರ್ಷ 2) 5 ವರ್ಷ 3) 10 ವರ್ಷ 4) 2 ವರ್ಷ

**49. ಕೆಳಗೆ ಕೊಟ್ಟಿರುವ ಜೋಡಿಪದಗಳಿಂದ ಸಂಬಂಧವನ್ನು ಹೊಂದಿದ ಪದಗಳ ಜೋಡಿಯನ್ನು ಆರಿಸಿ**
**ಮರ: ಸಸಿ :: ?**

1)ಬಂಡೆ : ಪರ್ವತ 2) ಆಕಳು : ಕರು 3) ದೈತ್ಯ : ಕುಬ್ಜ 4) ಗುಡಿಸಲು : ಮಹಲು

**50. SSLC ವಾರ್ಷಿಕ ಪರೀಕ್ಷೆಯನ್ನು ನಡೆಸುವ ಅಧಿಕಾರ ಯಾರಿಗೆ ನೀಡಲಾಗಿದೆ?**

1) ರಾಜ್ಯ ಮಂಡಳಿ 2) ಜಿಲ್ಲಾ ಆಡಳಿತ 3) ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ 4) ಮುಖ್ಯಮಂತ್ರಿ

**********************